
ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ
ದಿನಾಂಕ : DATE : 11/10/2019

### ಕಂದಾಯ, ಕೃಷಿ, ಗ್ರಾಮೀಣಾಭಿವೃದ್ಧಿ, ತೋಟಗಾರಿಕೆ, ವಸತಿಗೆ 6251 ಕೋಟಿ

# ₹7927 ಕೋಟಿ ಪೂರಕ ಅಂದಾಜು ಪಟ್ಟಿ

▪ ವಿಕ ಸುದ್ದಿಲೋಕ ಬೆಂಗಳೂರು 11/10/19



ರಾಜ್ಯದ ಅರ್ಧಕ್ಕಿಂತಲೂ ಹೆಚ್ಚು ಭಾಗ ನೆರೆ ಸಂತ್ರಸ್ತವಾಗಿದ್ದು, ಈ ಬಗ್ಗೆ ನಿಲುವಳಿ ಸೂಚನೆ ಮಂಡನೆಗೆ ಅವಕಾಶ ನೀಡುವಂತೆ ಪ್ರತಿಪಕ್ಷಗಳ ಪಟ್ಟಿನ ಮಧ್ಯೆಯೇ ಸಿಎಂ ಯಡಿಯೂರಪ್ಪ ಪ್ರಸಕ್ತ ಹಣಕಾಸು ವರ್ಷದ ಎರಡನೇ ಸಾಲಿನ ಪೂರಕ ಅಂದಾಜುಗಳ ಪಟ್ಟಿಯನ್ನು ವಿಧಾನಸಭೆಯಲ್ಲಿ ಮಂಡಿಸಿದ್ದಾರೆ.

ಮಾರ್ಚ್ ಅಂತ್ಯದೊಳಗಾಗಿ ನಾನಾ ಇಲಾಖೆಗಳ ಖರ್ಚಿಗಾಗಿ ರಾಜಸ್ವ ವೆಚ್ಚದಲ್ಲಿ ಒಟ್ಟು 7927 ಕೋಟಿ ರೂ. ಪೂರಕ ಅಂದಾಜಿಗೆ ಒಪ್ಪಿಗೆ ನೀಡುವಂತೆ ಸದನದಲ್ಲಿ ಪ್ರಸ್ತಾಪ ಮಂಡಿಸಿದ್ದಾರೆ. ನೆರೆ ಪರಿಹಾರ ಕಾರ್ಯಾಚರಣೆ ಹಿನ್ನೆಲೆಯಲ್ಲಿ ಕಂದಾಯ, ಗ್ರಾಮೀಣಾಭಿವೃದ್ಧಿ, ವಸತಿ, ಕೃಷಿ-ತೋಟಗಾರಿಕೆ, ಸೇರಿದಂತೆ ಪ್ರಮುಖ ಇಲಾಖೆಗಳಿಗೆ ಹೆಚ್ಚಿನ ಅನುದಾನ ನೀಡಲಾಗಿದೆ.

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿಯಲ್ಲಿ ಅರ್ಹ ರೈತರಿಗೆ ಸಹಾಯ ಧನ ನೀಡಲು ರಾಜ್ಯ ಸರಕಾರದ ವತಿಯಿಂದ 1 ಸಾವಿರ ಕೋಟಿ ರೂ. ನೀಡಲು ಪೂರಕ ಅಂದಾಜಿನಲ್ಲಿ ವ್ಯವಸ್ಥೆ ಕಲ್ಪಿಸಲಾಗಿದ್ದು, ರಾಷ್ಟ್ರೀಯ ಕೃಷಿ ವಿಸ್ತರಣೆ ತಂತ್ರಜ್ಞಾನ ತರಬೇತಿ ಯೋಜನೆಗೆ ರಾಜ್ಯದ ಪಾಲು 5.20 ಕೋಟಿ ರೂ ಒದಗಿಸಲಾಗಿದೆ. ರಸಗೊಬ್ಬರ ಮತ್ತು ಕಾಪು ದಾಸ್ತಾನಿಗೆ ರಾಜ್ಯ ಸಹಕಾರ ಮಾರಾಟ ಮಹಾ ಮಂಡಲಕ್ಕೆ 8.11 ಕೋಟಿ ರೂ. ಒದಗಿಸಿದ್ದು, ಜಾನುವಾರು ಗಣತಿಗಾಗಿ 8.96 ಕೋಟಿ ರೂ. ವಿನಿಯೋಗಿಸಲಾಗುತ್ತದೆ. ಅಬಕಾರಿ ಇಲಾಖೆಗೆ ಹೊಸ ವಾಹನ ಖರೀದಿಗೆ 7.77 ಕೋಟಿ ರೂ ಹಾಗೂ ನೇರ ವರ್ಗಾವಣೆ ಕಮಿಷನ್ ಪಾವತಿಸಲು 20 ಕೋಟಿ ರೂ ಹಾಗೂ ವಿಧಾನಸಭಾ ಚುನಾವಣೆಯಲ್ಲಿ ಆಗಿರುವ ವೆಚ್ಚಕ್ಕೆ ನಾನಾ ಬಾಬತ್ತಿನಲ್ಲಿ 15 ಕೋಟಿ ರೂ. ಲೋಕಾಯುಕ್ತ ಸಂಸ್ಥೆಯಲ್ಲಿ ಗುತ್ತಿಗೆ ನೌಕರರ ವೇತನ ವೆಚ್ಚಕ್ಕಾಗಿ 73 ಲಕ್ಷ, ಸ್ವಾತಂತ್ರ್ಯ ದಿನಾಚರಣೆ ಆಚರಣೆಗೆ 2.86 ಕೋಟಿ ರೂ ಒದಗಿಸಲು ಉಲ್ಲೇಖಿಸಲಾಗಿದೆ.

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಹೆಚ್ಚುವರಿ ಕಾಮಗಾರಿಗಳಿಗೆ 15 ಕೋಟಿ ರೂ. ಒದಗಿಸಲು ಅಭಿಯಾಚನೆಯಲ್ಲಿ ಸೇರಿಸಲಾಗಿದೆ. ಮೈಸೂರು ದಸರಾ ಆಚರಣೆಗೆ ಹೆಚ್ಚುವರಿಯಾಗಿ 10.41 ಕೋಟಿ ಅನುದಾನ ನೀಡಲು ಕೋರಲಾಗಿದೆ. ನ್ಯಾಷನಲ್ ಆಯುಷ್ ಮಿಷನ್ ಯೋಜನೆ ಅಡಿಯಲ್ಲಿ ಹೆಚ್ಚುವರಿಯಾಗಿ ಬಿಡುಗಡೆ ಮಾಡಲಾದ 35.67 ಕೋಟಿ ರೂ. ಒದಗಿಸಲಾಗಿದೆ. ಸಮಗ್ರ ಶಿಕ್ಷಣ ಕರ್ನಾಟಕ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ 2ನೇ ಸೆಟ್ ಸಮವಸ್ತ್ರ ವಿತರಿಸಲು 94 ಕೋಟಿ ರೂ. ಒದಗಿಸಲಾಗಿದೆ. ಸ್ಪೀಕರ್ ಕಚೇರಿ ನವೀಕರಣ ಹಾಗೂ ದಸರಾ ಆಚರಣೆಗೆ ಖರ್ಚಾದ ಹಣವೂ ಪೂರಕ ಅಂದಾಜಿನಲ್ಲಿ ಸೇರಿದೆ.

## ಯಾವ ಯಾವ ಇಲಾಖೆಗೆ ಎಷ್ಟು?

- **ಕೃಷಿ-ತೋಟಗಾರಿಕೆ:** 1590 ಕೋಟಿ ರೂ.
- **ಪಶು ಸಂಗೋಪನೆ :** 14 ಕೋಟಿ ರೂ.
- **ಹಣಕಾಸು :** 9 ಕೋಟಿ ರೂ.
- **ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ :** 827 ಕೋಟಿ ರೂ.
- **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ :** 1500 ಕೋಟಿ ರೂ.
- **ಅರಣ್ಯ :** 141 ಕೋಟಿ ರೂ.
- **ಸಹಕಾರ :** 30ಕೋಟಿ ರೂ.
- **ಸಮಾಜ ಕಲ್ಯಾಣ :** 232 ಕೋಟಿ ರೂ.
- **ಮಹಿಳಾ ಮತ್ತು ಮಕ್ಕಳ ಕಲ್ಯಾಣ** : 214 ಕೋಟಿ ರೂ.
- **ಯುವ ಜನಸೇವೆ :** 4 ಕೋಟಿ ರೂ.
- **ಆಹಾರ ಮತ್ತು ನಾಗರಿಕ ಪೂರೈಕೆ:** 21 ಕೋಟಿ ರೂ.
- **ಕಂದಾಯ:** 2161 ಕೋಟಿ ರೂ.
- **ಮಾಹಿತಿ ತಂತ್ರಜ್ಞಾನ:** 11 ಕೋಟಿ ರೂ.
- **ವಸತಿ :** 1000 ಕೋಟಿ ರೂ.
- **ಶಿಕ್ಷಣ :** 134 ಕೋಟಿ ರೂ.
- **ವಾಣಿಜ್ಯ ಮತ್ತು ಕೈಗಾರಿಕೆ :** 182 ಕೋಟಿ ರೂ.
- **ನಗರಾಭಿವೃದ್ಧಿ:** 678 ಕೋಟಿ ರೂ.
- **ಲೋಕೋಪಯೋಗಿ:** 169 ಕೋಟಿ ರೂ.
- **ಜಲಸಂಪನ್ಮೂಲ:** 78 ಕೋಟಿ ರೂ.
- **ಆರೋಗ್ಯ ಮತ್ತು ಕುಟುಂಬ ಕಲ್ಯಾಣ:** 977 ಕೋಟಿ ರೂ.
- **ಕಾರ್ಮಿಕ ಮತ್ತು ಕೌಶಲ್ಯಾಭಿವೃದ್ಧಿ :** 19 ಕೋಟಿ ರೂ.
- **ಇಂಧನ:** 2 ಕೋಟಿ ರೂ. ಕೋಟಿ ರೂ.